**SC No. 110/20217**
**PW-37**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 110/2017**

| | | |
|---|---|---|
| ಸಾಕ್ಷಿದಾರರ ಹೆಸರು | ರಾಜು | ಪ್ರಮಾಣ ವಚನ ಮಾಡಿದ ದಿನಾಂಕ: 03.12.2025 |
| ತಂದೆಯ/ಗಂಡನ ಹೆಸರು | ಬೊಮ್ಮರಾಯ | |
| ವಯಸ್ಸು | 36 ವರ್ಷ | |
| ವೃತ್ತಿ | ಸೆಂಟ್ರಿಂಗ್ ಕೆಲಸ | ಪ್ರಾ.ಸಾಃ 37 |
| ವಾಸ ಸ್ಥಳ | ಜನತಾನಗರ, ಮೈಸೂರು | ಚಾ.ಸಾಃ 56 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಜಯಮ್ಮ ನನಗೆ ತಾಯಿಯಾಗಬೇಕು. ಸಾಗರ್ ನನ್ನ ಅಣ್ಣ ಇರುತ್ತಾರೆ. ನಾನು ಕಳೆದ 18 ವರ್ಷಗಳಿಂದ ಸೆಂಟ್ರಿಂಗ್ ಕೆಲಸ ಮಾಡಿಕೊಂಡಿರುತ್ತೇನೆ. ಸೆಂಟ್ರಿಂಗ್ ಸಾಮಾನುಗಳನ್ನು ಮನೆಯ ಮುಂದೆ ಶೆಡ್ ನಲ್ಲಿ ಇಟ್ಟುಕೊಂಡಿರುತ್ತೇನೆ. ನನ್ನ ತಂದೆ ಬಿಲ್ಡಿಂಗ್ ನ ಸಿವಿಲ್ ಕಾಂಟ್ರಾಕ್ಟ್ ಕೆಲಸ ಮಾಡಿಸುತ್ತಾರೆ. ನನ್ನ ಮೊಬೈಲ್ ಫೋನ್ ನಂಬರ್ 8861990144 ಇರುತ್ತದೆ. ಸದರಿ ನಂಬರ್ ಅನ್ನು ಕಳೆದ 6-7 ವರ್ಷಗಳಿಂದ ಬಳಸುತ್ತಿದ್ದೇನೆ. ಅದಕ್ಕಿಂತ ಪೂರ್ವದಲ್ಲಿ ಯಾವ ಮೊಬೈಲ್ ನಂಬರ್ ಇತ್ತು ಎಂದು ಈಗ ನನಗೆ ಜ್ಞಾಪಕದಲ್ಲಿ ಇರುವುದಿಲ್ಲ. ನನ್ನ ಕಡೆ 2 ಸಿಮ್ ನಂಬರ್ ಗಳು ಇದ್ದವು. ನನಗೆ ವಿಸಿ ಮೂಲಕ ಹಾಜರುಪಡಿಸಿರುವ 10 ನೇ ಆರೋಪಿ ಮಂಜೇಶ್ ಗೊತ್ತಿರುವುದಿಲ್ಲ. ನನಗೆ ಈ ಹಿಂದೆ ಯಾರು ಹಲ್ಲೆ ಮಾಡಿರಲಿಲ್ಲ ಮತ್ತು ಈ ಬಗ್ಗೆ ಯಾವುದೇ

ಪ್ರಕರಣ ದಾಖಲಾಗಿರುವುದಿಲ್ಲ. ಆದರೆ ಈಗ್ಗೆ 7-8 ವರ್ಷಗಳ ಹಿಂದೆ ನನಗೆ ಅಪಘಾತ ಆಗಿತ್ತು. ನನಗೆ ಬೇರೆಯವರು ಕಾರಿನಲ್ಲಿ ಬಂದು ನಾನು ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಅಪಘಾತ ಪಡಿಸಿದರು ನಾನು ಆ ವೇಳೆಯಲ್ಲಿ ಬಿಳಿಕೆರೆಗೆ ಊಟಕ್ಕೆ ಹೋಗುತ್ತಿದ್ದೆ. ಅಲ್ಲಿ ಯಾರದೋ ಒಬ್ಬರದು ಬರ್ತ್ ಡೇ ಇತ್ತು ಅದಕ್ಕೆ ಹೋಗುತ್ತಿದ್ದೆ.

ಫೋನ್ ನಂಬರ್ 918123907706, 7411928371, 7795262740, 7795263402, 8050967310, 8867101882 ಮತ್ತು 8951344248 ನಿಂದ ನನ್ನ ಮೊಬೈಲ್ ನಂಬರ್ ಗಳಿಗೆ ಯಾವುದೇ ಕರೆಗಳು ಬಂದಿರುವುದರ ಬಗ್ಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ವಿವಿಪುರಂ ಪೊಲೀಸ್ ಠಾಣೆಗೆ ಕರೆಸಿರುವುದಿಲ್ಲ. ನಾನು ಪುನಃ ಹೇಳುವುದೇನೆಂದರೆ ವಿವಿಪುರಂ ಪೊಲೀಸ್ ಠಾಣೆಗೆ ಹೋಗಿದ್ದೆ ಅಲ್ಲಿ ನನನ ಸಹಿ ತೆಗೆದುಕೊಂಡಿದ್ದರು. ಆದರೆ ಯಾವ ಕಾರಣಕ್ಕಾಗಿ ನನ್ನ ಸಹಿ ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ ನಾನು ಈಗ ವಿಸಿ ಮೂಲಕ ನೋಡುತ್ತಿರುವ ಆರೋಪಿ ಮಂಜೇಶ್ ರವರನ್ನು ನೋಡಿರಲಿಲ್ಲ. ನನ್ನನ್ನು ಮೈಸೂರಿನ ಕೋರ್ಟ್ ಗೆ ಕರೆಸಿದ್ದರು. ಪೊಲೀಸರು ಏನು ಹೇಳಿದರೋ ಅದನ್ನು ನಾನು ಮಾಡಿದ್ದೆ ಆದರೆ ಈಗ ಅದು ಜ್ಞಾಪಕ ಇರುವುದಿಲ್ಲ. ಆ ದಿನ ನ್ಯಾಯಾಲಯದಲ್ಲಿ ಏನು ನಡೆಯಿತು ಎಂದು ಈಗ ನನಗೆ ನೆನಪಲ್ಲಿ ಇರುವುದಿಲ್ಲ. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಹೇಳಿಕೆಯನ್ನು **ನಿಪಿ-125** ಎಂದು ಸಾಕ್ಷಿದಾರರ

ಸಹಿಗಳನ್ನು **ನಿಪಿ–125(ಎ) ಮತ್ತು 125(ಬಿ)** ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಅಪಘಾತ ಆಗಿತ್ತು ಅಂತ ಹೇಳುವ ದಿವಸ ಬಿಳಿಕೆರೆ ಹೊಸಲು ಗ್ರಾಮದಲ್ಲಿ ಹಬ್ಬ ಇದ್ದುದರಿಂದ ನಾನು ಊಟಕ್ಕೆ ಹೋಗುತ್ತಿದ್ದೆ ಎಂದರೆ ಸರಿ. ನಾನು ನನ್ನ ಸ್ನೇಹಿತರ ಜೊತೆಯಲ್ಲಿ ಆ ದಿನ ಊಟಕ್ಕೆ ಹೋಗಿದ್ದೆ ಎಂದರೆ ಸರಿ. ಊಟದ ವಿಚಾರದಲ್ಲಿ ಸ್ವಲ್ಪ ಜಗಳ ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಜಗಳದಲ್ಲಿ ನನಗೆ ಹಲ್ಲೆ ಯಾಗಿ ಗಾಯ ಆಗಿತ್ತು ಎಂದರೆ ಸರಿಯಲ್ಲ. ನನಗೆ ಅಪಘಾತ ಆಗಿ ಗಾಯಗಳು ಆಗಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಗಾಯಗಳು ಜಗಳದಲ್ಲಿ ಆದ ಗಾಯಗಳು ಇದ್ದವು ಎಂದರೆ ಸರಿಯಲ್ಲ. ಆರೋಪಿ ಮಂಜೇಶ್ ನನ್ನನ್ನು ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದ್ದರು ಎಂದರೆ ಸರಿಯಲ್ಲ. ಅಂದಿನಿಂದ ಮಂಜೇಶನ ಪರಿಚಯ ಮುಂದುವರಿದಿತ್ತು ಮತ್ತು ನಾನು ಆಗಾಗ ಮಂಜೇಶನ ಮನೆಯ ಬಳಿ ಹೋಗಿ ಮಾತನಾಡಿಕೊಂಡು ಬರುತ್ತಿದ್ದೆ ಎಂದರೆ ಸರಿಯಲ್ಲ. 2010 ನೇ ಇಸವಿಯಲ್ಲಿ ಕರಿಯಪ್ಪನ ಕೊಲೆ ಪ್ರಕರಣದಲ್ಲಿ ಮಂಜೇಶ ಜೈಲಿಗೆ ಹೋಗಿದ್ದ ಆ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. 2015 ನೇ ಇಸವಿಯಲ್ಲಿ ಪಡುವಾರಹಳ್ಳಿಯ ರಾಘವೇಂದ್ರ ಅಲಿಯಾಸ್ ಲಲ್ಲು ಈತನ ಕೊಲೆ ಪ್ರಕರಣದಲ್ಲಿಯೂ ಸಹ ಮಂಜೇಶ ಜೈಲಿಗೆ ಹೋಗಿ ಜೈಲಿನಲ್ಲಿ

ಇದ್ದ ಆ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನ್ನ ಕಡೆ ಒಟ್ಟು 4 ಸಿಮ್ ನಂಬರ್ ಇತ್ತು ಎಂದರೆ ಸರಿ. ಫೋನ್ ನಂಬರ್ 8904304562, 7019546406 ಮತ್ತು 9591509778 ನನ್ನ ಮೊಬೈಲ್ ನಂಬರ್ ಗಳು ಇದ್ದವು ಎಂದರೆ ಸರಿಯಲ್ಲ. ಫೋನ್ ನಂಬರ್ 8123177123 ನನ್ನದು ಇರುತ್ತದೆ. 2017 ಜನವರಿಗಿಂತ ಪೂರ್ವದಲ್ಲಿ 5-6 ತಿಂಗಳಿಂದ ಆರೋಪಿ ಮಂಜೇಶ ಮೈಸೂರಿನ ಜೈಲಿನಲ್ಲಿ ಇದ್ದು ಫೋನ್ ನಂಬರ್ 918123907706, 7411928371, 7795262740, 7795263402, 8050967310, 8867101882 ಮತ್ತು 8951344248 ಗಳಿಂದ ನನ್ನ ಫೋನ್ ನಂಬರ್ 8904304562, 7019546406, 9591509778 ಮತ್ತು 8123177123 ಗಳಿಗೆ ಕರೆ ಮಾಡಿ ಊಟ ತೆಗೆದುಕೊಂಡು ಜೈಲಿಗೆ ಬಾ ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ. ನಾನು ಊಟ ತೆಗೆದುಕೊಂಡು ಮೈಸೂರು ಜೈಲಿಗೆ ಹೋಗಿ ಮಂಜೇಶನಿಗೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಮಂಜೇಶ ವಾರಕ್ಕೆ 2-3 ಬಾರಿ ಫೋನ್ ಮಾಡಿ ಊಟ ತೆಗೆದುಕೊಂಡು ಬಾ ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ. ಹಣವನ್ನು ಮಧು ಈತನ ಕಡೆಯಿಂದ ಪಡೆದುಕೊಳ್ಳುವಂತೆ ನನಗೆ ಹೇಳುತ್ತಿದ್ದ ಎಂದರೆ ಸರಿಯಲ್ಲ. ದಿನಾಂಕ 10.01.2017 ರಂದು ವಿವಿ ಪುರಂ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಬರುವಂತೆ ಹೇಳಿದ್ದು ನಾನು ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಆರೋಪಿ ಮಂಜೇಶ ಪೊಲೀಸರ ವಶದಲ್ಲಿ ಇದ್ದ ನಾನು ಆತನನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಆರೋಪಿ ಮಂಜೇಶ ಜೈಲಿನಿಂದ ವಿವಿಧ ಸಿಮ್ ಬಳಸಿ ನನಗೆ ಫೋನ್ ಮಾಡುತ್ತಿದ್ದ ಎಂದು ಹೇಳಿದ್ದೆ ಎಂದರೆ

ಸರಿಯಲ್ಲ.ನಾನು ಈಗ ಓದಿ ಹೇಳಿದ ನಿಪಿ–126 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕ 19.01.2017 ರಲ್ಲಿ ಮೈಸೂರಿನ ನ್ಯಾಯಾಲಯದಲ್ಲಿ ಸ್ವ ಇಚ್ಚೆಯಿಂದ ನಾನು ಹೇಳಿದ ಹೇಳಿಕೆಯನ್ನು ನ್ಯಾಯಾಧೀಶರು ಪಡೆದುಕೊಂಡಿದ್ದರು ಎಂದರೆ ಪೊಲೀಸರು ಹೇಳಿದ್ದರಿಂದ ಹೇಳಿದ್ದೆ. ನಾನು ಯಾರದೇ ಒತ್ತಡಕ್ಕೆ ಮಣಿಯದೇ ಸ್ವ ಇಚ್ಚೆಯಿಂದ ಹೇಳಿಕೆ ನೀಡುತ್ತಿದ್ದೇನೆ ಎನ್ನುವ ಬಗ್ಗೆ ಕಾತರಿ ಮಾಡಿಕೊಂಡು ನಾನು ಕೊಟ್ಟಂತಹ ಹೇಳಿಕೆಯ ಪ್ರಕಾರ ನಿಪಿ–125 ರಂತೆ ಹೇಳಿಕೆಯನ್ನು ನ್ಯಾಯಾಧೀಶರು ಬೆರಳಚ್ಚು ಮಾಡಿಸಿದ್ದರು ಎಂದರೆ ಸರಿಯಲ್ಲ. ನಾನು ಪೊಲೀಸರು ಹೇಳಿ ಕೊಟ್ಟ ರೀತಿಯಲ್ಲಿ ಹೇಳಿರುವುದಿಲ್ಲ ನಾನು ಸ್ವ ಇಚ್ಚೆಯಿಂದ ಹೇಳಿದ್ದೇನೆ ಎಂದರೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ಮತ್ತು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರ ಭಯದಿಂದ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ** :

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**